ಓ ಎಸ್ಃ 365/2020

ಪಿ ಡಬ್ಲ್ಯೂ ಃ 1

ದಿನಾಂಕಃ 21.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ವಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ವಿ ಎಸ್ ವಕೀಲರಿಂದಃ**

ಮುದ್ದಯ್ಯ ನವರು ನನ್ನ ತಂದೆ. ನನ್ನ ತಂದೆಯವರು ದಿನಾಂಕ ಃ 27.08.1941 ರಲ್ಲಿ ಸ.ನಂ. 2/3 ರಲ್ಲಿ 25 ಗುಂಟೆ, ಸ.ನಂ. 2 ರಲ್ಲಿ 17 ಗುಂಟೆಯನ್ನು ತಿಮ್ಮಯ್ಯ ನವರಿಂದ ಖರೀದಿ ಮಾಡಿದ್ದರು ಎಂದರೆ ಸರಿ . ದಿನಾಂಕ ಃ 26.03.1939 ರಲ್ಲಿ ಸ.ನಂ. 2 ರಲ್ಲಿ 3 ಎಕರೆ 16 ಗುಂಟೆಯನ್ನು ನನ್ನ ತಾತ ಮುದ್ದಯ್ಯ ನವರು ತಿಮ್ಮಯ್ಯ ನವರಿಂದ ಖರೀದಿ ಮಾಡಿದ್ದರು ಎಂದರೆ ಸರಿ. ನನ್ನ ತಾತ ಮುದ್ದಯ್ಯ ನವರು ದಿನಾಂಕ ಃ 09.09.1924 ರಂದದು ಸ.ನಂ. 2 ರಲ್ಲಿ ಇನ್ನು ಉಳಿಕೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ ಖರೀದಿ ಮಾಡಿರುವ ಜಮೀನುಗಳು ಸ.ನಂ. 2/1 ಮತ್ತು ಸ.ನಂ. 2/1 ಎ ಎಂದು ಪೋಡಿಯಾಗಿರುತ್ತವೆ ಎಂದರೆ ಸರಿ.

ನನ್ನ ತಾತನವರು ತೀರಿಕೊಂಡ ನಂತರ ನನ್ನ ತಂದೆ ಮತ್ತು ಅವರ ಮಕ್ಕಳು ಜಮೀನನ್ನು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ನನ್ನ ಕುಟುಂಬದಲ್ಲಿ ಭಾಗ ಆಗಿರುತ್ತದೆ, ಆನಂತರ 3ನೆ ಪ್ರತಿವಾದಿ ರವರ ಹೆಸರಿಗೆ ಸ.ನಂ. 2/1 ಎ ಪುಟ್ಟಸ್ವಾಮಿ ರವರಿಗೆ ಬಂದಿದ್ದು, ಅದರಂತೆ ಅವರಿಗೆ ಪಹಣಿಯಾಗಿರುತ್ತದೆ ಎಂದರೆ ಸಾಕ್ಷಿ ಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ . ಪಹಣಿಯನ್ನು **ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಸದರಿ ಪಹಣಿಯಲ್ಲಿ ಅವರ ಅಣ್ಣನ ಹೆಸರು ಇರುತ್ತದೆ ಎಂದು ಗುರುತಿಸಿದ ಮೇರೆಗೆ ಸದರಿ ಪಹಣಿಯನ್ನು ನಿ ಡಿ 1 ಎಂದು ಗುರುತಿಸಲಾಯಿತು.** ನಿ ಡಿ 1 ರಲ್ಲಿ ನನ್ನ ಅಣ್ಣ ರೂ. 1000/- ಗಳ ಸಾಲ ಪಡೆದಿರುತ್ತಾರೆ ಎಂದರೆ ಸರಿ. **ನನ್ನ ಅಣ್ಣ ನ ಹೆಸರಿಗೆ ಸದರಿ ಸ.ನಂ. ನಲ್ಲಿ ಮ್ಯುಟೇಷನ್ ಇರುತ್ತದೆ ಎಂದರೆ ಸರಿ. ಸದರಿ ಮ್ಯುಟೇಷನ್ ನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ ಡಿ 2 ಎಂದು ಗುರುತಿಸಲಾಯಿತು. ನಮ್ಮ ಕುಟುಂಬದಲ್ಲಿ ಭಾಗ ಆಗಿದ್ದರೂ ಭಾಗ ಆಗಿರುವುದಿಲ್ಲಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ.**

**ಪ್ರತಿವಾದಿ 1 ರವರ ವಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**